ಮೂಲ ದಾವಾ ಸಂಖ್ಯೆ 115 /2016 ಪಿ ಡಬ್ಲ್ಯೂ 1 ಎಸ್ ಸಿದ್ದಪ್ಪ ಬಿನ್ ಕೊಟ್ರಪ್ಪ

(ದಿನಾಂಕ 16-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲು 1ನೇ ಪ್ರತಿವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ತುಂಗಭದ್ರಾ ನದಿಯಿಂದ ಯಾವುದೇ ಅನುಮತಿಯನ್ನು ಪಡೆಯದೇ ಬಹಳಷ್ಟು ಜನ ಸದರಿ ನೀರನ್ನು ಬಳಸುತ್ತಿದ್ದಾರೆಂದರೆ ಸರಿ. ಈಗಲೂ ಕೂಡಾ ಬಹಳಷ್ಟು ಜನ ಪೈಪ್ ಲೈನನ್ನು ಅಳವಡಿಸಿರುವುದು ನಾನು ನೋಡಿರುತ್ತೇನೆಂದರೆ ಸರಿಯಲ್ಲ. ಸಾಕಷ್ಟು ಜನ ಈಗಲೂ ಸದರಿ ದಾವೆಯ ವಿವಾದಾಂಶಕ್ಕೆ ಸಂಬಂಧಪಟ್ಟಂತೆ ತುಂಗಭದ್ರಾ ನದಿ ದಂಡೆಯ ಅಕ್ಕಪಕ್ಕದಲ್ಲಿ ಟಿ ಸಿ ಗಳನ್ನು ಅಳವಡಿಸಿಕೊಂಡಿರುತ್ತಾರೆಂದರೆ ಇರಬಹುದು. ದಾವೆಯಲ್ಲಿ ಹೇಳಿರುವಂತಹ ಹಿನ್ನೀರಿನಲ್ಲಿ ಈಗಲೂ ಕೂಡಾ ಹಲವಾರು ಜನ ಪೈಪ್ ಲೈನನ್ನು ಅಳವಡಿಸಿಕೊಂಡಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಎಲ್ಲಾ ವಿಷಯ ಗೊತ್ತಿದ್ದರೂ ಗೊತ್ತಿರುವುದಿಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ತುಂಗಭದ್ರಾ ನದಿಯಿಂದ ಕಾನೂನುಬಾಹಿರವಾಗಿ ಪೈಪ್ ಲೈನನ್ನು ಅಳವಡಿಸಿಕೊಂಡು ನನ್ನ ಹೊಲಕ್ಕೆ ನೀರನ್ನು ತೆಗೆದುಕೊಂಡಿರುತ್ತೇನೆಂದರೆ ಸರಿಯಲ್ಲ. 2 ಮತ್ತು 3 ನೇ ವಾದಿಕೂಡಾ ತುಂಗಭದ್ರಾ ನದಿಯಿಂದ ಕಾನೂನುಬಾಹಿರವಾಗಿ ಪೈಪ್ ಲೈನನ್ನು ಅಳವಡಿಸಿಕೊಂಡು ಅವರ ಹೊಲಕ್ಕೆ ನೀರನ್ನು ಹರಿಸಿಕೊಳ್ಳುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ಆ ಸಮಯದಲ್ಲಿ ನನ್ನ ಸಮಕ್ಷಮ ಗ್ರಾಮ ಲೆಕ್ಕಾಧಿಕಾರಿಯವರ ಅನುಮತಿಯನ್ನು ಪಡೆದುಕೊಂಡು ಪೈಪ್ ಲೈನ್ ಹಾಕಬಹುದೆಂದು ಹೇಳಿರುತ್ತಾರೆಂದರೆ ಸರಿಯಲ್ಲ. ನಾನು ಪೈಪ್ ಲೈನ್ ಸಂಬಂಧ ತಹಶೀಲ್ದಾರ್, ಎ ಸಿ ಯವರಿಗೆ ಪತ್ರ ವ್ಯವಹಾರ ಮಾಡಿರುತ್ತೇನೆಂದರೆ ಸರಿ.

ಎ ಸಿ ಯವರ ಆದೇಶದ ಪ್ರಕಾರ ಗ್ರಾಮ ಲೆಕ್ಕಾಧಿಕಾರಿಯವರು ಸ್ಥಳ ಪರಿಶೀಲನೆಗೆ ಬಂದಿದ್ದರೆಂದರೆ ಸರಿಯಲ್ಲ. ಸದರಿಯವರು ಪರಿಶೀಲನೆ ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ನನ್ನನ್ನು ಹಾಗೂ ಇತರ ವಾದಿಯರಿಗೂ ಕೂಡಾ ಆ ಸಮಯದಲ್ಲಿ ಕರೆದಿದ್ದರು ಎಂದರೆ ಸರಿ ಆದರೆ ನಾವು ಹೋಗಿರಲಿಲ್ಲ. ಗ್ರಾಮದವರು ಸದರಿ ಪೈಪ್ ಲೈನಿನಿಂದ ಯಾರಿಗೂ ತೊಂದರೆಯಾಗುವುದಿಲ್ಲವೆಂದು ಎ ಸಿ ಯವರಿಗೆ ಮತ್ತು ಡಿ ಸಿ ಯವರಿಗೆ ಮನವಿಯನ್ನು ಕೊಟ್ಟಿರುತ್ತಾರೆಂದರೆ ಸರಿ. ಸದರಿ ಅರ್ಜಿಯಲ್ಲಿ ಹಿನ್ನೀರಿನಿಂದ ಜಲಸಮೃದ್ಧಿಯಾಗಿದ್ದು ಗ್ರಾಮದಲಿಲರುವ ಬೋರಬೆಲ್ ಗಳಿಗೂ ಕೂಡಾ ಹೆಚ್ಚಿನ ನೀರು ಬಂದಿರುವುದಾಗಿ ವರದಿಯನ್ನು ಸಲ್ಲಿಸಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ನನ್ನ ಹಾಗೂ ಗ್ರಾಮದವರ ವರದಿಯ ಮೇರೆಗೆ ರೆವಿನ್ಯೂ ಅಧಿಕಾರಿ ಮತ್ತು ಗ್ರಾಮ ಲೆಕ್ಕಾಧಿಕಾರಿ ಸ್ಥಳಕ್ಕೆ ಬಂದಿದ್ದು ಮಹಜರನ್ನು ಬರೆದಿರುತ್ತಾರೆಂದರೆ ಸರಿಯಲ್ಲ. ರೆವಿನ್ಯೂ ಅಧಿಕಾರಿ ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ಸದರಿ ಪೈಪ್ ಲೈನಿನಿಂದ ಯಾರಿಗೂ ತೊಂದರೆಇರುವುದಿಲ್ಲವೆಂದು ವರದಿಯನ್ನು ಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರೂ ಗೊತ್ತಿಲ್ಲವೆಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿಯು ನಾವು ಮಾಡುತ್ತಿರುವ ತೊಂದರೆಯ ಬಗ್ಗೆ ತಂಬ್ರಹಳ್ಳಿ ಪೋಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದರೆಂದರೆ ಸರಿ. ತಂಬ್ರಹಳ್ಳಿ ಪೋಲೀಸ್ ಠಾಣೆಯವರು ಪ್ರತಿವಾದಿಗೆ ಯಾವುದೇ ತೊಂದರೆ ಕೊಡಬಾರದೆಂದು ಹೇಳಿದ್ದು ನಾನು

ಮೂಲ ದಾವಾ ಸಂಖ್ಯೆ 115 /2016 ಪಿ ಡಬ್ಲ್ಯೂ 1 ಎಸ್ ಸಿದ್ದಪ್ಪ ಬಿನ್ ಕೊಟ್ರಪ್ಪ

ತೊಂದರೆ ಕೊಡುವುದಿಲ್ಲವೆಂದು ಹೇಳಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿ ಕೊಟ್ಟ ದೂರಿನ ಮೇರೆಗೆ ನಾನು ಕೊಟ್ಟ ಹೇಳಿಕೆ ಮೇರೆಗೆ ತಂಬ್ರಹಳ್ಳಿ ಪೋಲೀಸ್ ಠಾಣೆಯವರು ದಿ:19-06-2016 ರಂದು ಸದರಿ ದೂರನ್ನು ಮುಕ್ತಾಯಗೊಳಿಸಿರುತ್ತಾರೆಂದರೆ ಸರಿಯಲ್ಲ. ಕಾನೂನುಬಾಹಿರವಾಗಿ ಪರವಾನಿಗೆ ಕೊಟ್ಟಿರುವ ಬಗ್ಗೆ ನಾನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆಂದರೆ ಸರಿ.

(ಪ್ರತಿವಾದಿ 1 ರವರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದರು ಅನುಮತಿಸಲಾಯಿತು.)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ